ಇ.	1. ಎಂ.ಬಿ.ಮುದಿಯಪ್ಪಸವರ,ಅ.ಇಂ(ವಿ) 2. ಬಿ.ಆರ್.ಬದಾಮಿ, ಅ.ಇಂ(ವಿ) 3. ಸಿದ್ಧರಾಮಪ್ಪ.ಅ.ಇಂ(ವಿ) 4. ಸೈಯದ್ ಮೊಹಮದ್ ಹುಸೇನ್, ಅ.ಇಂ(ವಿ) 5. ಕೆ.ವಿಜಯಕುಮಾರ್,ಅ.ಇಂ.(ವಿ) 6. ವಿ.ಜೆಡ್.ಅಗರವಾಲ್,ಅ.ಇಂ(ವಿ)	ಇವರುಗಳ ವಿರುದ್ಧ ಸಕ್ಷಮ ನ್ಯಾಯಾಲಯದಲ್ಲಿ ಪಿರಿಕ್ ದಾವೆ ಹೂಡಲು ದಿನಾಂಕ:28-10-2005ರಲ್ಲಿ ಸರ್ಕಾರ ನಿರ್ಣಯವನ್ನು ಪೇಮಿಸ ಮಾಡಲಾಗಿದೆ.

ವಿ.ಸೂ.: (1) ಮು.ಇಂ.: ಮುಖ್ಯ ಇಂಜಿನಿಯರ್,
(2) ಅ.ಇಂ.: ಅಧೀಕ್ಷಕ ಇಂಜಿನಿಯರ್,
(3) ಕಾ.ಇಂ.: ಕಾರ್ಯಪಾಲಕ ಇಂಜಿನಿಯರ್,
(4) ಪ.ಕಾ.ಇಂ.: ಪದನಾಮ ಕಾರ್ಯಪಾಲಕ ಇಂಜಿನಿಯರ್,
(5) ಪ.ಇಂ.: ಪದನಾಮ ಇಂಜಿನಿಯರ್,
(6) ಕಿ.ಇಂ.: ಕಿರಿಯ ಇಂಜಿನಿಯರ್,
(7) ಪ್ರ.ದ.ಅ.ಪಾ.: ಪ್ರಥಮ ದರ್ಜೆ ಅಧಿಕೃತ ಪಾಲಕ.

(ಮಹಾಂತೇಶ ಮುಳ್ಳೂರ)
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ (ಇತರೆ)(ನೀರಾವರಿ-ಎ).

ಬಿಜಾಪುರ ಜಿಲ್ಲೆಯಲ್ಲಿ ಮಳೆಯಿಂದಾಗಿ ಸ್ಥಳಾಂತರಗೊಂಡ ಗ್ರಾಮಗಳ ಬಗ್ಗೆ

6(2): ಶ್ರೀ ಪಾಟೀಲ್ ಎ.ಎಸ್ (ನಡಹಳ್ಳಿ) (ದೇವರ ಹಿಪ್ಪರಗಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜಾಪೂರ ಜಿಲ್ಲೆಯಲ್ಲಿ 2009 ನೇ ಸಾಲಿನ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಿನಲ್ಲಿ ಬಿದ್ದ ಭಾರಿ ಮಳೆಯಿಂದಾಗಿ ದೇವರ ಹಿಪ್ಪರಗಿ ವ್ಯಾಪ್ತಿಯಲ್ಲಿ ಎಷ್ಟು ಗ್ರಾಮಗಳು ಸ್ಥಳಾಂತರಗೊಂಡಿವೆ; ಅವು ಯಾವುವು?

ಆ) ಸದರಿ ಗ್ರಾಮಗಳ ಸ್ಥಳಾಂತರಕ್ಕೆ ಎಷ್ಟು ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ; ಸದರಿ ರೈತರಿಗೆ ಪರಿಹಾರ ನೀಡಲಾಗಿದೆಯೇ; ಹಾಗಿದ್ದಲ್ಲಿ, ಯಾವ ರೈತರಿಗೆ ಎಷ್ಟು ಪರಿಹಾರ ನೀಡಲಾಗಿದೆ? (ವಿವರಗಳನ್ನು ನೀಡುವುದು)

ಇ) ಸ್ಥಳಾಂತರಗೊಂಡ ಗ್ರಾಮಗಳಲ್ಲಿ ಸರ್ಕಾರದಿಂದ ಅಥವಾ ಖಾಸಗಿಯವರಿಂದ ಮನೆ ಕಟ್ಟಡ ಕಾಮಗಾರಿ ಪ್ರಾರಂಭ ಮಾಡಲಾಗಿದೆಯೇ: ಪ್ರಾರಂಭ ಮಾಡಿದ್ದಲ್ಲಿ ಕಟ್ಟಡ ಕಾಮಗಾರಿಯನ್ನು ಗ್ರಾಮವಾರು ಯಾರಿಗೆ ವಹಿಸಲಾಗಿದೆ?

ಈ) ಇದುವರೆಗೂ ಸ್ಥಳಾಂತರಗೊಂಡ ಗ್ರಾಮಗಳಲ್ಲಿ ಎಷ್ಟು ಮನೆ ಕಟ್ಟಿದ ಕಾಮಗಾರಿಗಳು ಪೂರ್ಣಗೊಂಡಿವೆ; ಫಲಾನುಭವಿಗಳ ಹೆಸರು ಸಮೇತ ವಿವರ ನೀಡುವುದು?

ಉ) ಸ್ಥಳಾಂತರಗೊಂಡ ಎಲ್ಲಾ ಗ್ರಾಮಗಳಲ್ಲಿ ಮೂಲಭೂತ ಸೌಲಭ್ಯ ನೀಡುವಲ್ಲಿ ಮತ್ತು ಕಟ್ಟಿದ ಕಾಮಗಾರಿ ಪೂರ್ಣಗೊಳಿಸುವಲ್ಲಿ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ; ಬಂದಿದ್ದಲ್ಲಿ ಕಾರಣಗಳೇನು? (ವಿವರ ನೀಡುವುದು);

ಶ್ರೀ ಕರುಣಾಕರ ರೆಡ್ಡಿ (ಕಂದಾಯ ಸಚಿವರು):

ಅ) ದೇವರ ಹಿಪ್ಪರಗಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ (4) ಗ್ರಾಮಗಳನ್ನು ಸ್ಥಳಾಂತರಗೊಳಿಸಲು ಕ್ರಮ ವಹಿಸಲಾಗುತ್ತಿದೆ. ಅವುಗಳು ಬೂದಿಹಾಳ ಡೋಣ, ನಾಗರಾಳ ಡೋಣ, ಬೋಳವಾಡ ಹಾಗೂ ಸಾತಿಹಾಳ.

ಆ) ಸದರಿ ಗ್ರಾಮಗಳ ಸ್ಥಳಾಂತರಕ್ಕೆ ಸ್ವಾಧೀನಪಡಿಸಿಕೊಂಡ ಖರೀದಿಸಿದ ಜಮೀನುಗಳ ವಿವರಗಳು.

ಗ್ರಾಮಗಳು	ವಿಸ್ತೀರ್ಣ	ನೀಡಿದ ಪರಿಹಾರದ
	ಎ-ಗುಂಟೆ	ಮೊತ್ತ(ರೂ. ಲಕ್ಷಗಳಲ್ಲಿ)
ಬೂದಿಹಾಳ ಡೋಣ	18-26	33-57
ನಾಗರಾಳ ಡೋಣ	10-31	15-79
ಬೋಳವಾಡ	18-05	36-45
ಸಾತಿಹಾಳ	11-23	45-30
ಒಟ್ಟು	**59-05**	**131.11**

ಜಮೀನಿನ ಮೌಲ್ಯವನ್ನು ಸಂಬಂಧಪಟ್ಟ ಭೂ ಮಾಲೀಕರಿಗೆ ಬೆಲೆ ನಿರ್ಧರಣಾ ಸಮಿತಿಯು ನಿಗದಿಪಡಿಸಿದ ಮೊತ್ತವನ್ನು ಚೆಕ್ ಮುಖಾಂತರ ಆಯಾ ತಹಶೀಲ್ದಾರರ ಮೂಲಕ ಪಾವತಿಸಲಾಗಿದೆ.

ಇ) ಸ್ಥಳಾಂತರಿಸಲು ಪ್ರಸ್ತಾಪಿಸಿದ ಗ್ರಾಮಗಳ ಪುನರ್ವಸತಿ ಕೇಂದ್ರಗಳಲ್ಲಿ ದಾನಿಗಳಿಂದ ಹಾಗೂ ಸರ್ಕಾರಿ ಇಲಾಖೆಗಳಿಂದ ಮನೆ ಕಟ್ಟಡ ಕಾರ್ಯ ಪ್ರಾರಂಭಿಸಲಾಗಿದೆ.

ಗ್ರಾಮಗಳು	ಮನೆಗಳ ಸಂಖ್ಯೆ	ಏಜೆನ್ಸಿ
ಬೂದಿಹಾಳ ಡೋಣ	201	ಕೆ.ಎಚ್.ಬಿ
ನಾಗರಾಳ ಡೋಣ	116	ಕೆ.ಎಚ್.ಬಿ
ಬೋಳವಾಡ	195	ಕೆ.ಎಚ್.ಬಿ
ಸಾತಿಹಾಳ	229	ಕೆ.ಆರ್.ಐ.ಡಿ.ಎಲ್
ಒಟ್ಟು	**741**	

ಈ) ಮನೆಗಳ ಕಾಮಗಾರಿಗಳ ಪ್ರಗತಿ ಕೆಳಕಂಡ ಹಂತದಲ್ಲಿದೆ

ಗ್ರಾಮಗಳು	ಪ್ರಾರಂಭ	ತಳಪಾಯ	ಸಜ್ಜಾ	ಮೇಲ್ಛಾವಣಿ	ಪೂರ್ಣ
ಬೂದಿಹಾಳ ಡೋಣ	201	03	47	25	126
ನಾಗರಾಳ ಡೋಣ	116	31	10	15	60
ಬೋಳವಾಡ	195	39	23	17	116
ಸಾತಿಹಾಳ	229	86	43	99	01
ಒಟ್ಟು	**741**	**159**	**123**	**156**	**303**

ಉ) ಸ್ಥಳಾಂತರಗೊಂಡ ಎಲ್ಲಾ ಗ್ರಾಮಗಳಲ್ಲಿ ಮೂಲಭೂತ ಸೌಲಭ್ಯ ಕಲ್ಪಿಸುವಲ್ಲಿ ಮತ್ತು ಮನೆ ಕಟ್ಟಡ ಕಾಮಗಾರಿ ಪೂರ್ಣಗೊಳಿಸುವಲ್ಲಿ ವಿಳಂಬವಾಗಿರುತ್ತದೆ. ಇದಕ್ಕೆ ಹಲವಾರು ಕಾರಣಗಳಿರುತ್ತವೆ. ಉದಾ:

1. ದಾನಿಗಳು ಸಮಯಕ್ಕೆ ಸರಿಯಾಗಿ ಪ್ರಾರಂಭಿಸದೇ ಇರುವುದು.
2. ಸದರಿ ಜಮೀನುಗಳು ಕಪ್ಪು ಮಣ್ಣಿನಿಂದ ಕೂಡಿರುವುದರಿಂದ ಹೆಚ್ಚು ಮಳೆ ಬಿದ್ದ ಪ್ರಯುಕ್ತ ಕಾಮಗಾರಿಗಳಿಗೆ ಅಡೆತಡೆ ಉಂಟಾಗಿರುತ್ತದೆ.
3. ಏಜೆನ್ಸಿಗಳ ಬದಲಾವಣೆ ಮಾಡಿದ ಕಾರಣಗಳಿಂದ.
4. ಕೆಲವು ಗ್ರಾಮಗಳಲ್ಲಿ ಕಚ್ಚಾ ಸಾಮಗ್ರಿಗಳು ಮತ್ತು ನುರಿತ ಕೆಲಸಗಾರರ ಕೊರತೆ.